**ಎಸ್‌ಸಿಸಿಹೆಚ್-8**

**12ನೇ ಹೆಚ್ಚುವರಿ ಮತ್ತು ಎ.ಸಿ.ಎಂ.ಎಂ. ನ್ಯಾಯಾಲಯ, ಬೆಂಗಳೂರು**

**ಸಿ.ಸಿ.ಃ 1656/2023**

**ಡಿ.ಡಬ್ಲ್ಯೂ-1**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಾಮಚಂದ್ರ ಆರ್ |
| ತಂದೆಯ ಹೆಸರು | ಃ | ರಂಗಪ್ಪ |
| ವಯಸ್ಸು | ಃ | 56 ವರ್ಷ |
| ಉದ್ಯೋಗ | ಃ | ಕೆನರಾ ಬ್ಯಾಂಕ್ ನೌಕರ |
| ವಾಸ ಸ್ಥಳ | ಃ | ಮಹಾಲಕ್ಷ್ಮೀ ಲೇಔಟ್, ಬೆಂಗಳೂರು |

**ದಿನಾಂಕಃ 13-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಮಾನ್ಯ ವಕೀಲರಿಂದ .**

ಪಿರ್ಯಾದುದಾರರು ನನಗೆ ಸುಮಾರು **12**ವರ್ಷಗಳಿಂದ ಪರಿಚಿತರು. **2019** ರ ನವೆಂಬರ್ ತಿಂಗಳಿನಲ್ಲಿ **2** ಲಕ್ಷ ರೂಗಳ ಹಣವನ್ನು ನಗದಾಗಿ ಪಿರ್ಯಾದುದಾರರಿಂದ ಪಡೆದಿದ್ದೆನು. ಸದರಿ ಹಣದ ಭದ್ರತೆಗಾಗಿ ಸಹಿ ಮಾಡಿ ಒಂದು ಖಾಲಿ ಚೆಕ್ಕನ್ನು ನೀಡಿದ್ದೆನು. ಸದರಿ ಹಣವನ್ನು **2020** ನೇ ಸಾಲಿನಲ್ಲಿ **UPI** ವರ್ಗಾವಣೆ ಮೂಲಕ ಪಿರ್ಯಾದುದಾರರು ಮತ್ತು ಅವರ ಮಗಳ ಖಾತೆಗೆ ಒಟ್ಟು ರೂ**. 1,26,000/-** ಗಳನ್ನು ಮತ್ತು **2021** ನೇ ಏಪ್ರಿಲ್ ನಲ್ಲಿ ರೂ**. 74,000/-** ಗಳ ನ್ನು ನಗದಾಗಿ ನೀಡಿರುತ್ತೇನೆ. ಹಣವನ್ನು ಮರುಪಾವತಿ ಮಾಡಿದ ನಂತರ ಚೆಕ್ಕನ್ನು ವಾಪಸ್ಸು ಕೊಡಿ ಎಂದು ಕೇಳಿದ್ದು, ಪಿರ್ಯಾದುದಾರರು ಕೊಡುತ್ತೇನೆ ಎಂದು ಹೇಳಿದ್ದು, ನಂತರ ನಾನು ಕೊಡುತ್ತಾರೆ ಎಂದು ಸುಮ್ಮನಾಗಿರುತ್ತೇನೆ.

www.ecourtsindia.com
This is a True Copy of the Court Records Online. Authenticated @ districts.ecourtsindia.com/cnr/KABC020040552023/truecopy/order-5.pdf

**ಸಿ.ಸಿ.: 1656/2023**

**DW-1:**

ಜುಲೈ **2021** ರಲ್ಲಿ ನನಗೆ ಬೆಂಗಳೂರಿನಿಂದ ಮಂಡ್ಯಾ ಜಿಲ್ಲೆಯ ಬೆಳ್ಳೂರು ಶಾಖೆಗೆ ವರ್ಗಾವಣೆಯಾಗಿರುತ್ತದೆ, ಹಾಗಾಗಿ ನಾನು ಪಿರ್ಯಾದುದಾರರ ಬಳಿ ಚೆಕ್ಕನ್ನು ಕೇಳುವುದನ್ನು ನಿಲ್ಲಿಸಿರುತ್ತೇನೆ. ಪಿರ್ಯಾದುದಾರರು ನೀಡಿದ್ದ ನೋಟೀಸ್ ತಲುಪಿದ್ದು , ಸದರಿ ನೋಟೀಸ್ ಗೆ ನಾನು ಪ್ರತ್ಯುತ್ತರವನ್ನು ನೀಡಿರುತ್ತೇನೆ.

ಪಿರ್ಯಾದಿನಲ್ಲಿ ಹೇಳಿರುವ ರೀತಿ ನನ್ನ ಮತ್ತು ಅವರ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ. ಆ ಬಗ್ಗೆ ನಾನು ಚೆಕ್ ನೀಡಿರುವುದಿಲ್ಲ. ಕೆನರಾ ಬ್ಯಾಂಕ್ ನ ನನ್ನ ಒ.ಡಿ ಅಕೌಂಟ್ ಮತ್ತು ಉಳಿತಾಯ ಖಾತೆಯ ಸ್ಟೇಟ್ಮೆಂಟ್ ಆಫ್ ಅಕೌಂಟ್ಸ್ ಅನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ನಿಡಿ**-1** ಮತ್ತು **2** ಎಂದು ಗುರುತಿಸಲಾಯಿತು. **2019** ರಲ್ಲಿ ಸಾಲದ ಭದ್ರತೆಗಾಗಿ ನೀಡಿದ ಚೆಕ್ಕನ್ನು ಸಾಲ ಮರುಪಾವತಿ ಮಾಡಿದ ನಂತರ ಹಿಂದಿರುಗಿಸದೆ ದುರ್ಬಳಕೆ ಮಾಡಿಕೊಂಡು ಅಕ್ರಮ ಹಣ ಪಡೆಯುವ ಉದ್ದೇಶದಿಂದ ಪಿರ್ಯಾದುದಾರರ ಸುಳ್ಳು ಪ್ರಕರಣದ ದಾಖಲಿಸಿರುತ್ತಾರೆ. ಆದ್ದರಿಂದ ನನ್ನನ್ನು ನಿರ್ದೋಷಿ ಎಂದು ಪರಿಗಣಿಸಿ ಬಿಡುಗಡೆ ಮಾಡಬೇಕೆಂದು ಪ್ರಾರ್ಥನೆ.

ಪಿರ್ಯಾದುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**ಓ.ಹೇ.ಕೇ.ಸ.ಇ.ಓ**

**12ನೇ ಎಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**

This is a True Copy of the Court Records Online. Authenticated @ districts.ecourtsindia.com/cnr/KABC020040552023/truecopy/order-5.pdf